# ಸಾವಯವ ಸಂಪದ

## ಸಾವಯವ ಕೃಷಿ, ಗ್ರಾಮೀಣ ಅಭಿವೃದ್ಧಿ ಪತ್ರಿಕೆ

## ತಿಂಗಳ ಮಾತು

**ನಮ್ಮ ಊಟದ ಬಟ್ಟಲಿನಲ್ಲಿ ವಿಷ**

2015ರಲ್ಲಿ ನಮ್ಮನ್ನೆಲ್ಲ ಬೆಚ್ಚಿಬೀಳಿಸಿದ ಸುದ್ದಿ:ದಿಢೀರ್ ಆಹಾರವೆಂದು ಡಂಗೂರ ಹೊಡೆದು ಕೊಳ್ಳುತ್ತಿದ್ದ ಮ್ಯಾಗಿ ನೂಡಲ್ಸ್ ದಢಾರ್ಎಂದು ನಮ್ಮದೇಶದ ಉದ್ದಗಲದಲ್ಲಿ ನಿಷೇಧಿಸಲ್ಪಟ್ಟಿದ್ದು. ಯಾಕೆಂದರೆ ಅದರಲ್ಲಿ ಮಿತಿ ಮೀರಿದ ಪ್ರಮಾಣದಲ್ಲಿ ಸೀಸದ ವಿಷವಿತ್ತು.

ಅದರ ಉತ್ಪಾದಕ ಕಂಪನಿಯ ಮಾರಾಟ ತಂತ್ರ ಹೇಗಿತ್ತು ಅಂತೀರಾ? ಶಾಲೆಗಳಿಗೆ ನುಗ್ಗಿ ಮುಕ್ಕಳಿಗೆ ಪುಕ್ಕಟೆ ಮ್ಯಾಗಿ ನೂಡಲ್ಸ್ ತಿನ್ನಿಸಿ ರುಚಿ ಹಿಡಿಸುವುದು. ಅದಲ್ಲದೆ, ಬಹುಮಾಧ್ಯಮಗಳಲ್ಲಿ ಅಬ್ಬರದ ಪ್ರಚಾರ. ಎರಡೇ ನಿಮಿಶಗಳಲ್ಲಿ ತಿನಿಸು ತಯಾರು ಎಂದು ದಾರಿತಪ್ಪಿಸುವ ಜಾಹೀರಾತು. ಅಂತೂ ದಶಕಗಳ ಕಾಲ ನಮ್ಮ ದೇಶದ ಕೋಟಿಗಟ್ಟಲೆ ಜನರಿಗೆ ವಿಷ ಉಣಿಸಿದರಲ್ಲ...

'ವಿಷಭರಿತ ಜಂಕ್ಫುಢ್' ತೊಲಗಿತು ಎಂದು ನಾವೆಲ್ಲ ನಿಟ್ಟುಸಿರು ಬಿಡುವಾಗ ಅದು ಹೊಸ ಅವತಾರದಲ್ಲಿ ಪುನಃ ಮಾರುಕಟ್ಟೆ ಬಂದಿದೆ. ಇದು ನಮ್ಮೆಲ್ಲರಿಗೂ ಎಚ್ಚರಿಕೆಯ ಗಂಟೆ. ಇಂತಹ ಅಪಾಯಗಳು ಮತ್ತೆ ಮತ್ತೆ ನಮಗೆ ಎದುರಾಗುತ್ತಿವೆ. ನಾವು ತಿನ್ನುವ ಹಣ್ಣುತರಕಾರಿಧಾನ್ಯಗಳು ಎಲ್ಲದರಲ್ಲಿಯೂ ವಿಷ ಸೇರಿಕೊಳ್ಳುತ್ತಿದೆ. ನಮ್ಮ ಆಹಾರದಲ್ಲಿ ಯಾವುದು ವಿಷಭರಿತ ಮತ್ತು ಯಾವುದು ವಿಷಮುಕ್ತ ಎಂದು ಗುರುತಿಸುವುದೇ ಕಷ್ಟವಾಗುತ್ತಿದೆ.

ಇಂತಹ ಸನ್ನಿವೇಶದಲ್ಲಿ ಕರಿಮೋಡಗಳ ಮಧ್ಯೆ ಮಿಂಚುವ ಮಿಂಚಿನಂತೆ 'ವಿಷಮುಕ್ತ ಊಟದ ಬಟ್ಟಲು ಆಂದೋಲನ' ಅಲ್ಲಲ್ಲಿ ಬಲಗೊಳ್ಳುತ್ತಿದೆ. ಇದರ ಜೊತೆಯಲ್ಲೇ, ವಿಷಮುಕ್ತ ಆಹಾರ ಒದಗಿಸಬಲ್ಲ ಸಾವಯವ ಕೃಷಿ ಅಲ್ಲಲ್ಲಿ ಬೇರುಬಿಡುತ್ತಿದೆ.

ಇವೆಲ್ಲವನ್ನು ದಾಖಲಿಸಬೇಕಾದ ಅಗತ್ಯ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಜೊತೆಗೆ ಆಂದೋಲನವನ್ನು ಮುನ್ನಡೆಸುತ್ತಿರುವ ಸಂಘಟನೆಗಳ ನಡುವೆ ಹಾಗೂ ಸಾವಯವ ಕೃಷಿಕರ ನಡುವೆ ವಿಚಾರ ಮತ್ತು ಅನುಭವ ವಿನಿಮಯಕ್ಕಾಗಿ ವೇದಿಕೆಯೊಂದರ ನಿರ್ಮಾಣ ಆಗಬೇಕಾಗಿದೆ.

ಈ ಆಶಯಗಳನ್ನು ಸಾಕಾರಗೊಳಿಸಲು ಆನ್ಲೈನ್ ಪತ್ರಿಕೆ ಒಂದು ಸಮರ್ಥ ಮಾಧ್ಯಮ ಎಂದು ಭಾವಿಸಿದ್ದೇವೆ. ಅದಕ್ಕಾಗಿ ಚಿಗುರಿದೆ **"ಸಾವಯವ ಸಂಪದ"**. ಮೊದಲ ಸಂಚಿಕೆ ನಿಮ್ಮ ಎದುರಿಗಿದೆ. ನಿಮ್ಮ ಪ್ರತಿಕ್ರಿಯೆ ಹಾಗು ಸಲಹೆಗಳಿಗೆ ಸದಾ ಸ್ವಾಗತ. ವಿಷಮುಕ್ತ ಆಹಾರ ಆಂದೋಲನದಲ್ಲಿ ಹಾಗೂ ಸಾವಯವ ಕೃಷಿಯಲ್ಲಿ ಸಕ್ರಿಯರಾಗಿರುವ ಎಲ್ಲರಿಂದಲೂ ಬರಹ ಹಾಗೂ ಮಾಹಿತಿ ನಿರೀಕ್ಷಿಸುತ್ತೇವೆ.

**_ಸಂಪಾದಕ.**

## ಮುನ್ನೋಟ

ಅ) ಸಾವಯವ ಕೃಷಿಕ ಗ್ರಾಹಕ ಬಳಗ, ಸಾಹಿತ್ಯ ಕೇಂದ್ರ, ಪಂಜೆಮಂಗೇಶರಾವ್ ರಸ್ತೆ, ಮಂಗಳೂರು ಪ್ರಕಟಿಸಿರುವ ಪುಸ್ತಕ ಬಿಡುಗಡೆ ಸಮಾರಂಭ:

**'ವಿಷಮುಕ್ತ ಊಟದ ಬಟ್ಟಲು ಆಂದೋಲನ'ದ 2015_16 ಚಟುವಟಿಕೆಗಳ ದಾಖಲೀಕರಣ ಪುಸ್ತಕ.**

| | |
|---|---|
| ಪುಸ್ತಕದ ಸಂಪಾದಕರು | : ಅಡ್ಡೂರು ಕೃಷ್ಣ ರಾವ್ |
| ಸ್ಥಳ | : ಸಾಹಿತ್ಯ ಕೇಂದ್ರದ ಎದುರು, ಪಿ.ಎಂ. ರಾವ್ ರಸ್ತೆಯಲ್ಲಿ ಸಂತೆ ನಡೆಯುವ ಸ್ಥಳ. |
| ದಿನಾಂಕ_ಸಮಯ | : 13_11_2016_: ಬೆಳಿಗ್ಗೆ ಗಂಟೆ 8:30 ಕ್ಕೆ |
| ಪುಸ್ತಕದ ಬೆಲೆ | : ರೂ 30 |
| ಪುಸ್ತಕ ಕಾದಿರಿಸಲು ಎಸ್ಸೆಮೆಸ್ ಕಳಿಸಿ | : 9448152620 |

ಆ) ಕೃಷಿ ಮಾಧ್ಯಮ ಕೇಂದ್ರ ಮತ್ತು ಫಾರ್ಮರ್ ಫಸ್ಟ್ ಟ್ರಸ್ಟ್, ಭಟ್ ಬಿಲ್ಡಿಂಗ್, ಪುತ್ತೂರು, ದಕ್ಷಿಣ ಕನ್ನಡ ಪ್ರಕಟಿಸಿರುವ ಪುಸ್ತಕ ಬಿಡುಗಡೆ ಸಮಾರಂಭ:

**'ಅಲಕ್ಷಿತ ಕಲ್ಪವೃಕ್ಷ ಹಲಸು ಭವಿಷ್ಯದ ಬೆಳೆ'**

| | |
|---|---|
| ಪುಸ್ತಕದ ಲೇಖಕರು | : ಶ್ರೀಪಡ್ರೆ, "ಅಡಿಕೆ ಪತ್ರಿಕೆ"ಯ ಕಾರ್ಯನಿರ್ವಾಹಕ ಸಂಪಾದಕರು |
| ದಿನಾಂಕ | : 20_11_2016, ಭಾನುವಾರ |
| ಪುಸ್ತಕದ ಬೆಲೆ | : ರೂ. 150 |
| ಪ್ರಕಟಣಾಪೂರ್ವ ಬೆಲೆ | : ರೂ. 125 (ಅಂಚೆ ವೆಚ್ಚ ಪ್ರತ್ಯೇಕ) (ಕನಿಷ್ಠ ಐದು ಪ್ರತಿ ಖರೀದಿಸಿದರೆ ಮಾತ್ರ) |
| ಪುಸ್ತಕ ಕಾದಿರಿಸಲಿಕ್ಕಾಗಿ ಎಸ್ಸೆಮೆಸ್ ಕಳಿಸಿ | : 9448654177 |



ಮಂಗಳೂರಿನ ಕದ್ರಿ ಪಾರ್ಕಿನಲ್ಲಿ ತೋಟಗಾರಿಕೆ ಇಲಾಖೆ ಆಯೋಜಿಸಿದ್ದ ಉತ್ಸವದಲ್ಲಿ ಜನರನ್ನು ಆಕರ್ಷಿಸಿದ ಹೂ ತರಕಾರಿಗಳಿಂದ ರಚಿಸಲ್ಪಟ್ಟ ಕಲಾಕೃತಿ.



ಸಂಪುಟ-೧ ಸಂಚಿಕೆ-೧ ಅಕ್ಟೋಬರ್ ೨೦೧೬

## ತಿಂಗಳ ಬರಹ



### ವಿಷ ಉಣ್ಣಬೇಡಿ, 'ಸಾವಯವ ಸಂತೆ 'ಗೊಮ್ಮೆ ಬನ್ನಿ

ಸುಮಾರು ಐವತ್ತು ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ವ್ಯವಸಾಯ ಮಾಡುತ್ತಿದ್ದುದೇ ಸಾವಯವ ಪದ್ದತಿಯಲ್ಲಿ. ಹಟ್ಟಿಗೊಬ್ಬರ, ಹಸುರೆಲೆ ಗೊಬ್ಬರ, ಬೂದಿ ಇವುಗಳಿಂದಲೇ ಹೊಲದ ಬೆಳೆಗಳಿಗೆ ಪೋಷಣೆ. ಸಸ್ಯಗಳಿಗೆ ರೋಗ ಅಥವಾ ಕೀಟ ಹಾವಳಿ ಕಂಡುಬಂದಲ್ಲಿ ಸುಣ್ಣ, ಉಪ್ಪು, ಬೂದಿ, ಔಷಧೀಯ ಸಸ್ಯಗಳ ಕಷಾಯಗಳಿಂದಲೇ ನಿಯಂತ್ರಣ. ಆದರೆ ಈಗ ಏನಾಗಿದೆ?

ಹೆಚ್ಚೆಚ್ಚು ಫಸಲು ಪಡೆದು, ಹೆಚ್ಚೆಚ್ಚು ಲಾಭ ಮಾಡಿಕೊಳ್ಳವ ಧಾವಂತದಲ್ಲಿ ಬಹುಪಾಲು ಬೇಸಾಯಗಾರರು ರಾಸಾಯನಿಕ ಪದ್ಧತಿಯಲ್ಲಿ ಬೇಸಾಯ ಮಾಡುತ್ತಿದ್ದಾರೆ. ಬೀಜಗಳನ್ನು ಅಥವಾ ಎಳೆಸಸಿಗಳನ್ನು ವಿಷ ರಾಸಾಯನಿಕಗಳ ದ್ರಾವಣದಲ್ಲಿ ಮುಳುಗಿಸುವ ಮೂಲಕ ಕೃಷಿಯ ಆರಂಭ. ಹಟ್ಟಿಗೊಬ್ಬರ ಹಾಗೂ ಹಸುರೆಲೆ ಗೊಬ್ಬರ ಹಾಕದ ಕಾರಣ ಬರಡಾದ ಮಣ್ಣಿಗೆ ರಾಸಾಯನಿಕ ಗೊಬ್ಬರಗಳ ಸೇರ್ಪಡೆ. ಬೆಳೆಗಳಿಗೆ ರೋಗ ಅಥವಾ ಕೀಟಗಳು ದಾಳಿ ಮಾಡಿದಾಗಲಂತೂ ವಿವಿಧ ರಾಸಾಯನಿಕ ಪೀಡೆನಾಶಕ ಅಥವಾ ಕೀಟನಾಶಕಗಳ ಪ್ರಯೋಗ. ಇವೆಲ್ಲ ಕೀಟಗಳ ಜೀವ ತೆಗೆಯುವಂತೆ ಮನುಷ್ಯರ ಜೀವವನ್ನೂ ತೆಗೆಯಬಲ್ಲವು ಎಂಬ ಸತ್ಯವನ್ನು ಎಲ್ಲರೂ ಮರೆತಿದ್ದಾರೆ!

ಇನ್ನೂ ಒಂದು ಆತಂಕದ ವಿಚಾರ. ಈ ಎಲ್ಲ ವಿಷ ರಾಸಾಯನಿಕಗಳಿಗೆ ಸಸ್ಯ ರೋಗಕಾರಕ ಸೂಕ್ಷ್ಮ ಜೀವಿಗಳೂ, ಕೀಟಗಳೂ ಸಡ್ಡು ಹೊಡೆದಿವೆ. ಯಾಕೆಂದರೆ ಮನುಷ್ಯರ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ 25_30 ವರುಷಗಳ ಅಂತರ. ಆದರ ಇವುಗಳಲ್ಲಿ ಆ ಅಂತರ ಕೆಲವೇ ಗಂಟೆಗಳು ಅಥವಾ ಕೆಲವೇ ದಿನಗಳು. ತಮ್ಮ ಸಂತಾನದ ಉಳಿವಿಗಾಗಿ ಅವು ತಲೆಮಾರಿನಿಂದ ತಲೆಮಾರಿಗೆ ನಿರೋಧಕ ಶಕ್ತಿ ಹೆಚ್ಚಿಸಿಕೊಂಡು, ವಿಷ ರಾಸಾಯನಿಕಗಳಿಗೆ ಸಡ್ಡು ಹೊಡೆಯುತ್ತವೆ.

ಪರಿಣಾಮ, ಈ ಹಿಂದೆಲ್ಲ ಪ್ರಯೋಗಿಸಿದ ಪ್ರಮಾಣದಲ್ಲಿ ವಿಷರಾಸಾಯನಿಕ ಪ್ರಯೋಗಿಸಿದರೆ, ರೋಗ ಮತ್ತು ಕೀಟಹಾವಳಿ ನಿಯಂತ್ರಣಕ್ಕೆ ಬರುವುದಿಲ್ಲ ಹಾಗಾಗಿ ವರುಷದಿಂದ ವರುಷಕ್ಕೆ ಕೃಷಿಕರು ಪ್ರತಿ ಎಕರೆಗೆ ಹೆಚ್ಚೆಚ್ಚು ಪ್ರಮಾಣದಲ್ಲಿ ಪೀಡೆನಾಶಕಗಳನ್ನು ಸುರಿಯಬೇಕಾಗುತ್ತದೆ. ಅಷ್ಟೇ ಅಲ್ಲ, ಹೆಚ್ಚೆಚ್ಚು ಪ್ರಬಲ ಅಥವಾ ಶಕ್ತಿಶಾಲಿಯಾದ ವಿಷಕಾರಿ ರಾಸಾಯನಿಕಗಳನ್ನು ರೋಗ ಮತ್ತು ಕೀಟ ಹತೋಟಿಗಾಗಿ ಹೊಲ ಹಾಗೂ ತೋಟಗಳಲ್ಲಿ ಬಳಸಲೇಬೇಕಾಗುತ್ತದೆ.

**ಊಟದ ಬಟ್ಟಲಿನಲ್ಲಿ ತುಂಬುತ್ತಿರುವ ವಿಷ**

ಇಂತಹ ಪರಿಸ್ಥಿತಿಯಲ್ಲಿ ಗ್ರಾಹಕರಾಗಿ ನಾವು ಕೇಳಲೇ ಬೇಕಾದ ಪ್ರಶ್ನೆ ಏನೆಂದರೆ, ಸಸ್ಯಗಳಿಗೆ ಸುರಿದ ಈ ಟನ್ನುಗಟ್ಟಲೆ ವಿಷ ರಾಸಾಯನಿಕಗಳು ಅಂತಿಮವಾಗಿ ಎಲ್ಲಿಗೆ ಹೋಗುತ್ತವೆ? ಇದಕ್ಕೆ ನೇರ ಹಾಗೂ ಸರಳ ಉತ್ತರ: ಅವೆಲ್ಲವೂ ಆಹಾರ ಮೂಲಕ ನಮ್ಮ ಊಟದ ಬಟ್ಟಲಿಗೆ ಬಂದು, ನಮ್ಮ ದೇಹ ಸೇರುತ್ತವೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಈಗ ನಮ್ಮ ಊಟದ ಬಟ್ಟಲಿನಲ್ಲಿ ವಿಷ ಆಹಾರ ತುಂಬಿದೆ. ನಾವಿಂದು ಕಾಣುತ್ತಿರುವ ಕ್ಯಾನ್ಸರ್ ಇತ್ಯಾದಿ ರೋಗಗಳ ಹೆಚ್ಚಳಕ್ಕೆ, ನಮ್ಮ ರೋಗ ನಿರೋಧಕ ಶಕ್ತಿಯ ಕುಸಿತಕ್ಕೆ ಯುವಜನರ ಹಲವಾರು ಅನಾರೋಗ್ಯಗಳಿಗೆ ಈ ವಿಷಯುಕ್ತ ಆಹಾರ ಸೇವನೆಯೇ ಕಾರಣ.

**ಹಾಗಾದರೆ, ಈ ಸಮಸ್ಯೆಗೆ ಏನು ಪರಿಹಾರ?**

ಒಂದೇ ಒಂದು ಪರಿಹಾರವೆಂದರೆ ವಿಷಮುಕ್ತ ಆಹಾರ ಸೇವನೆ; ವಿಷಮುಕ್ತ ಆಹಾರ ಸಿಗುವುದಾದರೂ ಎಲ್ಲಿ? ಬೆಂಗಳೂರು, ಮೈಸೂರು, ಧಾರವಾಡ ಹಾಗೂ ಇನ್ನು ಕೆಲವು ನಗರಗಳಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆಸಿದ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವ ಮಳಿಗೆಗಳಿವೆ.

ಈಗ ಮಂಗಳೂರಿನಲ್ಲೂ ಸಾವಯವ ಕೃಷಿ ಉತ್ಪನ್ನಗಳ ಮಾರಾಟಕ್ಕಾಗಿ ಒಂದು ವ್ಯವಸ್ಥೆ ಆರಂಭವಾಗಿದೆ. ೨೦೧೪ರಿಂದ ಪಂಜೆಮಂಗೇಶರಾವ್ ರಸ್ತೆಯ ಸಾಹಿತ್ಯ ಕೇಂದ್ರದ ಮುಂಭಾಗದಲ್ಲಿ ಭಾನುವಾರಗಳಲ್ಲಿ (ತಿಂಗಳ ಮೊದಲ ಭಾನುವಾರದ ಹೊರತಾಗಿ) 'ಸಾವಯವ ತರಾಕಾರಿ ಸಂತೆ' ಜರುಗುತ್ತಿದೆ .ನೂರಾರು ಜನ ಅಲ್ಲಿಗೆ ಬಂದು ಸಾವಯವ ಪದ್ಧತಿಯಲ್ಲಿ ಬೆಳೆದ ಅಕ್ಕಿ, ಉದ್ದು, ಹುರುಳಿ, ತರಕಾರಿಗಳು, ಹಣ್ಣುಗಳು, ಸಾಂಬಾರ ಪದಾರ್ಥಗಳನ್ನು ಖರೀದಿಸುತ್ತಿದ್ದಾರೆ.

ಸಾವಯವ ಕೃಷಿ ಉತ್ಪನ್ನಗಳನ್ನು ಬೆಳಸಿದವರೇ ಅವನ್ನು ಸಾವಯವ ಸಂತೆಗಳಲ್ಲಿ ಮಾರಾಟ ಮಾಡುತ್ತಿರುವುದು ವಿಶೇಷ. ಬಳಕೆದಾರರು ಇವರೊಂದಿಗೆ ಮುಖಾಮುಖಿ ಮಾತನಾಡಿ ಎಲ್ಲ ಮಾಹಿತಿ ಪಡೆಯಲು ಮುಕ್ತ ಅವಕಾಶವಿದೆ. ಆ ಮೂಲಕ ಇಲ್ಲಿ ಮಾರಾಟವಾಗುವ ಕೃಷಿ ಉತ್ಪನ್ನಗಳೆಲ್ಲವೂ ವಿಷಮುಕ್ತ ಎಂಬುದನ್ನು ಖಚಿತಪಡಿಸಿಕೊಳ್ಳಬಹುದು. ವಿಷಮುಕ್ತ ಆಹಾರ ಖರೀದಿಗಾಗಿ ಒದಗಿಸಿರುವ ಇಂತಹ ಒಳ್ಳೆಯ ಅವಕಾಶವನ್ನು ಅಗತ್ಯವಾಗಿ ಬಳಸಿಕೊಳ್ಳೋಣ _ ನಮಗಾಗಿ ಮತ್ತು ನಮ್ಮ ಮನೆಯವರಿಗಾಗಿ.

—ಸಾವಯವ ಕೃಷಿಕ ಗ್ರಾಹಕ ಬಳಗ, ಸಾಹಿತ್ಯ ಕೇಂದ್ರ, ಪಿ.ಎಂ.ರಸ್ತೆ, ಮಂಗಳೂರು.

## ಸಾವಯವ ಕೃಷಿ ಸಂಗತಿ

**ಸಾವಯವ ಕೃಷಿಯ ಯಶಸ್ಸಿಗಾಗಿ ಕ್ರಮಗಳು**

೧. ಜಮೀನಿನಲ್ಲಿ ವಿವಿಧ ಬೆಳೆಗಳ ಬೇಸಾಯ ಮತ್ತು ಬೆಳೆಪರಿವರ್ತನೆ.
೨. ಸಾವಯವ ವಸ್ತುಗಳು, ಕೃಷಿ ಮತ್ತು ಜಾನುವಾರು ತ್ಯಾಜ್ಯ ವಾಸ್ತುಗಳಿಂದ ಕಂಪೋಸ್ಟ್ ತಯಾರಿಸಿ, ಹೊಲ/ತೋಟಕ್ಕೆ ಹಾಕುವುದು.
೩. ಹೆಚ್ಚೆಚ್ಚು ಎರೆಹುಳ ಗೊಬ್ಬರ ತಯಾರಿಸಿ ಜಮೀನಿಗೆ ಸೇರಿಸುವುದು.
೪. ಸೆಣಬು, ಡಯಂಚ ಇಂತಹ ಹಸುರೆಲೆ ಗೊಬ್ಬರದ ಬೆಳೆ ಬೆಳೆದು ಅವು ಹೂ ಬಿಡುವ ಮುಂಚೆ ಹೊಲದ ಮಣ್ಣಿಗೆ ಸೇರಿಸುವುದು.
೫. ನೆಲಗಡಲೆ (ಶೇಂಗಾ), ಹೊಂಗೆ, ಹರಳು, ಬೇವು ಇಂತಹ ಎಣ್ಣೆ ಕಾಳುಗಳ ಹಿಂಡಿಯನ್ನು ಹೊಲ/ತೋಟಕ್ಕೆ ಗೊಬ್ಬರವಾಗಿ ಹಾಕುವುದು.

ಇವೆಲ್ಲದರಿಂದಾಗಿ ಮಣ್ಣಿನ ಫಲವತ್ತತೆ ಹೆಚ್ಚಾಗಿ, ಮುಖ್ಯ ಬೆಳೆಗಳಲ್ಲಿ ಉತ್ತಮ ಇಳುವರಿ ಪಡೆಯಲು ಸಾಧ್ಯ.

## ಕೃಷಿಕರ ಬದುಕು_ಸಾಧನೆ



**೩೩ ವರುಷ ಬತ್ತದ ಸಾವಯವ: ಉಷಾ ಮೆಹಂದಳೆ ಸಾಹಸ**

"ಸುಮಾರು ಮೂವತ್ತು ವರುಷಗಳ ಹಿಂದಿನ ಮಾತು. ನಾವಾಗ ಗದ್ದೆಗೆ ರಾಸಾಯನಿಕ ಗೊಬ್ರ ಹಾಕ್ತಾ ಭತ್ತ ಬೆಳೆಸ್ತಿದ್ದೆವು. ಇಳುವರಿ ಚೆನ್ನಾಗಿ ಬರ್ತಿತ್ತು. ಆಗೊಮ್ಮೆ ಮಿತ್ತಬಾಗಿಲಿನ ದೇವರಾಯರಲ್ಲಿಗೆ ಹೋಗಿದ್ದೆವು. ಅವರು ಯಾವುದೇ ರಾಸಾಯನಿಕ ಹಾಕದೆ ಭತ್ತ ಬೆಳಿತಾ ಇದ್ರು. ನಾವೂ ಯಾಕೆ ಹಾಗೆ ಭತ್ತ ಬೆಳೀಬಾರ್ದು ಅನ್ನಿಸಿತು. ಮುಂದಿನ ಹಂಗಾಮಿನಲ್ಲಿ ನಾವು ನಮ್ಮ ಜಮೀನಿಗೆ ಯಾವುದೇ ರಾಸಾಯನಿಕ ಗೊಬ್ರ ಹಾಕಲಿಲ್ಲ. ಅವತ್ತಿನಿಂದ ಇವತ್ತಿನ ವರೆಗೂ, ನಮ್ಮ ಐದೆಕ್ರೆ ಜಮೀನಿಗೆ ಒಂದಿಷ್ಟೂ ರಾಸಾಯನಿಕ ಗೊಬ್ರ ಹಾಕಿಲ್ಲ. ಸೋಗೆ, ಸೊಪ್ಪು, ಕಸಕಡ್ಡಿ, ದನದ ಸೆಗಣಿ, ಮೂತ್ರ ಮತ್ತು ಗೋಬರ್ ಗ್ಯಾಸ್ ಪ್ಲಾಂಟಿನ ಸ್ಲರಿ – ಇದೇ ನಮ್ಮ ಗದ್ದೆಗೆ ತೋಟಕ್ಕೆ ಗೊಬ್ಬರ" ಎನ್ನುತ್ತಾ ಉಷಾ ಮೆಹಂದಳೆ (೫೮) ತಮ್ಮ ಸಾವಯವ ಕೃಷಿಯ ಹಿನ್ನೆಲೆ ಹಾಗೂ ಸೂತ್ರವನ್ನು ನಮ್ಮ ಜೊತೆ ಹಂಚಿಕೊಂಡರು.

ನಾವು, ಮಂಗಳೂರಿನ ಸಾವಯವ ಕೃಷಿಕ ಗ್ರಾಹಕ ಬಳಗದ ೪೫ ಸದಸ್ಯರು, ೫ ಜೂನ್ ೨೦೧೬ರಂದು ಬೆಳ್ತಂಗಡಿ ತಾಲೂಕಿನ ತೆಂಕ – ಕಾರಂದೂರು ಗ್ರಾಮದ ಅವರ ಜಮೀನಿಗೆ ಭೇಟಿ ಇತ್ತ ಸಂದರ್ಭ. ಉಷಾ ಮೆಹಂದಳೆ ಅದೇ ಉಸಿರಿನಲ್ಲಿ ಇದನ್ನೂ ಹೇಳಿದರು: "ನಾವು ಒಂದೇಟಿಗೆ ರಾಸಾಯನಿಕ ಗೊಬ್ಬರ ಹಾಕೋದನ್ನು ನಿಲ್ಲಿಸಬಾರದಿತ್ತು. ಹಾಗೆ ಮಾಡಿದ್ದರಿಂದಾಗಿ ಮುಂದಿನ ನಾಲ್ಕು ವರುಷ ನಮಗೆ ಭತ್ತದ ಇಳುವರಿ ಅರ್ಧಕ್ಕರ್ಧ ಕಡಿಮೆಯಾಯಿತು. ಹಂತಹಂತವಾಗಿ ರಾಸಾಯನಿಕ ಗೊಬ್ರ ಕಡಿಮೆ ಮಾಡ್ತಾ ಬಂದಿದ್ದರೆ ಹೀಗಾಗ್ತಿರಲಿಲ್ಲ. ಅಷ್ಟು ಇಳುವರಿ ನಷ್ಟವಾದರೂ ನಾವು ಪುನಃ ರಾಸಾಯನಿಕ ಗೊಬ್ರ ಹಾಕಲಿಲ್ಲ. ಅನಂತರ ನಮ್ಮ ಜಮೀನು ಸಾವಯವ ಬೇಸಾಯಕ್ಕೆ ಹೊಂದಿಕೊಂಡಿತು. ಈಗ ನಮಗೆ ನಾಲ್ಕು ಎಕ್ರೆಯಿಂದ ನಲುವತ್ತು ಕ್ವಿಂಟಾಲ್ ಭತ್ತದ ಇಳುವರಿ ಬರ್ತಿದೆ"

ತೋಟದಲ್ಲಿರುವ ಮರಗಳಿಗೂ ಅವರು ಹಾಕುವುದು ಸಾವಯವ ಗೊಬ್ಬರ ಮಾತ್ರ: ಎರಡು ವರುಷಕ್ಕೊಮ್ಮೆ ಅಡಿಕೆ ಮರಗಳಿಗೆ ತಲಾ ಎರಡು ಬುಟ್ಟಿ ಮತ್ತು ತೆಂಗಿನ ಮರಗಳಿಗೆ ತಲಾ ನಾಲ್ಕು ಬುಟ್ಟಿ ಕಂಪೋಸ್ಟ್. ಆ ಮರಗಳ ಸೋಗೆಗಳು ಬೇಸಗೆಯಲ್ಲಿಯೂ ಹಚ್ಚಹಸುರು. ತೋಟದಲ್ಲಿ ಕೊಕ್ಕೋ, ಜಾಯಿಕಾಯಿ, ಲವಂಗ, ಕರಿಮೆಣಸು ಬಳ್ಳಿಗಳು ಸೊಂಪಾಗಿ ಬೆಳೆದು ನಿಂತಿವೆ. ಇವೆಲ್ಲಕ್ಕೂ ಸಾವಯವ ಗೊಬ್ಬರವೇ ಕಾರಣ ಎಂಬುದು ಉಷಾ ಮೆಹಂದಳೆ ಅವರ ಅನುಭವ.

"ಕೆಲಸಕ್ಕೆ ಆಳುಗಳಿಲ್ಲ ಅನ್ನೋ ಕಾರಣಕ್ಕಾಗಿ ನಮ್ಮ ಜಮೀನು ಮಾರಬೇಕಾಗಿಲ್ಲ. ಸಾವಯವ ಬೇಸಾಯ ಮಾಡಿದರಾಯಿತು. ಅದಕ್ಕಾಗಿ ಮಹಿಳೆಯರು ತೋಟದ ಕೆಲಸದಲ್ಲಿ ಸ್ವಲ್ಪ ತೊಡಗಿಸಿಕೊಂಡರೆ ಸಾಕು. ತೆಂಗು, ಅಡಿಕೆ ಮರಗಳಿಂದ ಬಿದ್ದ ಸೋಗೆಗಳನ್ನು ಕತ್ತರಿಸಿ ಮರಗಳ ಬುಡಕ್ಕೆ ಹಾಕುವ ಕೆಲಸ ಮಾಡಿದರೂ ಸಾಕು. ಜೊತೆಗೆ ಸಾವಯವ ಗೊಬ್ಬರ ಹಾಕುವ ವ್ಯವಸ್ಥೆ ಮಾಡಿಕೊಂಡರೆ ಸಾವಯವ ಬೇಸಾಯ ನಮ್ಮನ್ನು ಸೋಲಿಸುವುದಿಲ್ಲ. ಆದರೆ ತಾಳ್ಮೆ ಬೇಕು" ಎಂಬುದು ಅವರ ಅನುಭವದ ಮಾತು.

ಒಂದೆರಡು ದನ ಸಾಕಬೇಕು. ಮನೆಗೆ ಹಾಲು ಸಿಗೋದಲ್ಲದೆ ಆ ದನಕರುಗಳ ಸೆಗಣಿಮೂತ್ರದಿಂದ ಗೊಬ್ಬರವೂ ಸಿಗುತ್ತದೆ. ಅದು ಮೂರರಿಂದ ಐದೆಕ್ರೆ ಜಮೀನಿಗೆ ಧಾರಾಳ ಸಾಕು. ದನಗಳ ಕರುಗಳನ್ನು ಮಾರಬೇಕಾಗಿಲ್ಲ. ತೋಟದ ಹುಲ್ಲು ಹಾಕಿ ಅವನ್ನು ಸಾಕಿದರೆ, ಹಾಲು ಮತ್ತು ಗೊಬ್ಬರ ಒದಗಿಸಿ, ನಾವು ಸಾಕಲು ಮಾಡಿದ ವೆಚ್ಚವನ್ನು ಬಡ್ಡಿ ಸಹಿತ ತೀರಿಸುತ್ತವೆ ಎನ್ನುತ್ತಾರೆ ಉಷಾ ಮೆಹಂದಳೆ.

ಅವರ ಹಟ್ಟಿಯ ಪಕ್ಕದಲ್ಲೇ ಗೋಬರ್ ಗ್ಯಾಸ್ ಘಟಕ. ಅದರಿಂದ ಹರಿಯುವ ಸ್ಲರಿ ಸಂಗ್ರಹಿಸಲು ಟ್ಯಾಂಕ್. ಅಲ್ಲಿಂದ ಸ್ಲರಿಯನ್ನು ತೋಟದ ಮರಗಳಿಗೆ ಪಂಪ್ ಮಾಡುವ ವ್ಯವಸ್ಥೆಯಿದೆ. ಆ ಮರಗಳಿಗೆ ತಿಂಗಳಿಗೊಂದು ಬಕೆಟ್ ಸ್ಲರಿ ಹಾಕಿದರೂ ಧಾರಾಳ ಪೋಷಕಾಂಶ ಲಭ್ಯ. ತೆಂಗಿನ ಸಿಪ್ಪೆಗಳನ್ನು ತೆಂಗಿನ ಮರಗಳ ಬುಡದಲ್ಲೇ ಜೋಡಿಸಿ ಮಣ್ಣು ಮುಚ್ಚುವುದರಿಂದ ತೇವಾಂಶ ರಕ್ಷಣೆ ಹಾಗೂ ಮರಗಳಿಗೆ ಪೊಟಾಷ್ ಒದಗಣೆ. ಅಡಿಕೆ ಹಾಳೆ ಚೂರುಚೂರು ಮಾಡಿ ದನಗಳಿಗೆ ಆಹಾರವಾಗಿ ಬಳಕೆ. ಇಂತಹ ಸುಧಾರಿತ ವಿಧಾನಗಳ ಅಳವಡಿಕೆ ಮೆಹಂದಳೆಯವರ ಕೃಷಿಯ ವಿಶೇಷ.

ಎರಡು ದಶಕಗಳ ಮುಂಚೆ ದಕ್ಷಿಣಕನ್ನಡದ ಬೆಳ್ತಂಗಡಿ ತಾಲೂಕಿನಲ್ಲಿ ಮಹಿಳಾ ಸಬಲೀಕರಣದ ಆಂದೋಲನದಲ್ಲಿ ಮುಂಚೂಣಿಯಲ್ಲಿ ಇದ್ದವರು ಉಷಾ ಮೆಹಂದಳೆ. ಮಹಿಳಾ ಮಂಡಳಿಯ ಅಧ್ಯಕ್ಷೆಯಾಗಿದ್ದಾಗ ಬಡ ಮಹಿಳೆಯರಿಗೆ ಹೊಲಿಗೆ ತರಬೇತಿ ನಡೆಸಿ ಕೊಟ್ಟಿದ್ದು, ಗ್ರಾಮ ಪಂಚಾಯತಿನ ಸದಸ್ಯೆಯಾಗಿ ಸರಕಾರದ ಸವಲತ್ತುಗಳನ್ನು ಬಡಕುಟುಂಬಗಳಿಗೆ ಒದಗಿಸಲು ಮುತುವರ್ಜಿ ವಹಿಸಿದ್ದು – ಇವೆಲ್ಲ ಬೆಳ್ತಂಗಡಿ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಅವರ ಹೆಸರು ಮನೆಮಾತಾಗಲು ಕಾರಣ.

ಉಷಾ ಮೆಹಂದಳೆ ಅವರದು ೩೩ ವರುಷಗಳ ಸಾವಯವ ಭತ್ತದ ಬೇಸಾಯದ ಸಾಹಸ. ಇದಕ್ಕೆ ಪತಿ ಸೀತಾರಾಮ ಮೆಹಂದಳೆ ಅವರ ನಿರಂತರ ಸಹಕಾರ. ಎರಡು ವರುಷಗಳಿಂದೀಚೆಗೆ ಮಗ ಅರುಣ್ ಅವರ ಸಹಕಾರ. ಮೆಹಂದಳೆಯವರ ಈ ಸಾಹಸದ ಕಾಯಕಕ್ಕೆ ಅವರಿಗೆ ಸಿಗುವ ಪ್ರತಿಫಲ – ಎಲ್ಲಿಂದಲೋ ಹುಡುಕಿಕೊಂಡು ಬಂದವರು ಇವರ ಹೊಲದ ಸಾವಯವದ ಅಕ್ಕಿ ಖರೀದಿಸುವಾಗ ಮೂಡುವ ಧನ್ಯತಾ ಭಾವ.

**_ಅಡ್ಡೂರು ಕೃಷ್ಣ ರಾವ್**





## ಸ್ವೀಕೃತ ಕೃಷಿ ಪತ್ರಿಕೆಗಳ ಮುಖ ಪುಟ









## ಹಿನ್ನೋಟ

**ತುಮಕೂರಿನಲ್ಲಿ ಸಿರಿಧಾನ್ಯ ಮೇಳ :**

ತುಮಕೂರು ವಿಶ್ವವಿದ್ಯಾಲಯದ ಸರ್ ಎಂ ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಮೊಟ್ಟಮೊದಲ ಬಾರಿಗೆ ಆಯೋಜಿಸಿದ್ದ 'ಸಿರಿಧಾನ್ಯ ಮೇಳ' ೨೩ ಅಕ್ಟೋಬರ್ ೨೦೧೬ರಲ್ಲಿ ಮುಕ್ತಾಯವಾಯಿತು ಇದನ್ನು ತುಮಕೂರು ವಿವಿ ಪ್ರಸಾರಾಂಗ , ನಬಾರ್ಡ್, ಧಾನ್ಯ ಸಂಸ್ಥೆ ಮತ್ತು ಹಿರೇಹಳ್ಳಿ ಕೃಷಿ ವಿಜ್ಞಾನ ಕೇಂದ್ರ ಜಂಟಿಯಾಗಿ ಸಂಘಟಿಸಿದ್ದರು,
ಸಮಾರೋಪ ಸಮಾರಂಭದಲ್ಲಿ ಜಿಲ್ಲಾ ಪಂಚಾಯತ್ ಸಿ ಇ ಓ ಶಾಂತಾರಾಂ ಸಿರಿಧಾನ್ಯಗಳ ಕಣಜವಾದ ತುಮಕೂರು ಜಿಲ್ಲೆಯಲ್ಲಿ ರೈತರನ್ನು ಪ್ರೋತ್ಸಾಹಿಸಲಿಕ್ಕಾಗಿ ಸಿರಿಧಾನ್ಯ ಸಂಸ್ಕರಣ ಘಟಕ ಸ್ಥಾಪನೆ ಬಗ್ಗೆ ಜಿಲ್ಲಾ ಪಂಚಾಯತ್ ಪರಿಶೀಲಿಸಲಿದೆ" ಎಂದರು
ಸಿರಿಧಾನ್ಯ ಮೇಳಕ್ಕೆ ರಾಜ್ಯದ ಬೇರೆಬೇರೆ ಭಾಗಗಳಿಂದ ಬಂದ್ದಿದ್ದ ಮಹಿಳೆಯರು ತಮ್ಮತಮ್ಮ ಊರಿನ ವಿಶೇಷ ಸಿರಿಧಾನ್ಯ ತಿನಿಸುಗಳನ್ನು ಮೇಳದಲ್ಲಿ ಪ್ರದರ್ಶಿರ್ಸಿದರು .
ಪೌಷ್ಟಿಕಾಂಶಗಳ ಆಗರವಾದ ಸಿರಿಧಾನ್ಯಗಳಿಂದ ತಯಾರಿಸಬಹುದಾದ ವಿವಿಧ ತಿನಿಸುಗಳ ಬಗ್ಗೆ, ಸಿರಿಧಾನ್ಯಗಳ ಅಡುಗೆ ಬಗ್ಗೆ ಮೇಳಕ್ಕೆ ಆಗಮಿಸಿದ್ದ ನೂರಾರು ಜನರು ಕುತೂಹಲದಿಂದ ವಿಚಾರಿಸಿ ತಿಳಿದುಕೊಂಡರು. ರಾಗಿ ಹಲ್ವಾ, ಸಜ್ಜೆರೊಟ್ಟಿ, ಸಾಮೆ ಪಾಯಸ, ನವಣೆ ಪಾಯಸ, ನವಣೆ ಉಪ್ಪಿಟ್ಟು, ಸಾಮೆಚಕ್ಕುಲಿ, ಇವು ಸಿರಿಧಾನ್ಯ ಮೇಳದಲ್ಲಿ ಜನಮನ ಗೆದ್ದ ಕೆಲವು ರುಚಿಕರ ತಿನಿಸುಗಳು .

## ಫೋಟೋ ಅಂಕಣ



ಸಾವಯವ ಕೃಷಿಕ ಗ್ರಾಹಕ ಬಳಗ ಮಂಗಳೂರಿನ ಪಿ.ಎಂ.ರಸ್ತೆಯಲ್ಲಿ ಸಂಘಟಿಸುವ ಭಾನುವಾರದ ಸಾವಯವ ಸಂತೆಯ ನೋಟ

**ಮೊದಲ ಸಂಚಿಕೆಯ ಪ್ರಾಯೋಜಕರು**

sāranga infotech

http://www.saaranga.com/

**ಸಾವಯವ ಸಂಪದ : ಸಂಪಾದಕ ಅಡ್ಡೂರು ಕೃಷ್ಣರಾವ್ "ಸಂಪದ. ನೆಟ್" ಪರವಾಗಿ ಪ್ರಕಟಿಸಿದ ಆನ್ಲೈನ್ ಪತ್ರಿಕೆ.**
**ಸಾವಯವ ಸಂಪದ ಪತ್ರಿಕೆಗೆ ತಾಂತ್ರಿಕ ನೆರವು ನೀಡಿದವರು: ಸಾರಂಗ ಇನ್‌ಫೋಟೆಕ್, ಬೆಂಗಳೂರು**